doc-593
TP-2

Reg No B G 155

29 11 72

In The State First Golden Jubilee Celebrated Paper 'Satyavadi' daily, Mysore 4

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಸಂಪಾದಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಆಂಧ್ರದಲ್ಲಿ ಗೋಳೀಬಾರ್ ನಾವು

ಮೈಸೂರು ದಸರಾ ವಸ್ತುಪ್ರದರ್ಶನ ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 22-11-1972 ಬುಧವಾರ

ಕಲಾಕ್ಷೇತ್ರ

5-30 ರಿಂದ 6-30 ಸಂಜೆ	ರವಿಮೆಲೋಡಿ ಮತ್ತು ಪಾರ್ಟಿ, ಮೈಸೂರು,	ವಾದ್ಯಗೋಷ್ಠಿ
6-30 ರಿಂದ 8	ಶ್ರೀ ಬಿ. ಡಿ. ಲಕ್ಷ್ಮಣ್	ಸಂಗೀತ
8 ರಿಂದ 9-30	ಕುಮಾರಿ ಉಮಾರಾಣಿ	ನೃತ್ಯ

ಜೀವನರಾಯನಕಟ್ಟೆ

5-30 ರಿಂದ 6-30	ವೆಂಕಟರಾಮು (ಕೊಸು)	ಸಂಗೀತ
6-30 ರಿಂದ 7-30	ಕುಮಾರಿ ಶಕುಂತಲ. ಮೈಸೂರು	ಸಂಗೀತ
7-30 ರಿಂದ 9 30	ಮೋಹರ್ ಆರ್ಟ್ಸ್ ಅಸೋಸಿಯೇರ್ಸ್, ಬೆಂಗಳೂರು ನಾಟಕ – " ಬ್ಲಾಕ್ ಮಾರ್ಕೆಟ್ "	

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

ಕನ್ನಡ ರಾಜ್ಯೋತ್ಸವ ದಿನಾಚರಣೆ

ಮೈಸೂರು — ಗಾಂಧಿನಗರದಲ್ಲಿ ನೆಡೆದ ರಾಜ್ಯೋತ್ಸವದಲ್ಲಿ, ಸಾರಿಗೆ, ಪ್ರವಾಸೋದ್ಯಮ ಮತ್ತು ಕಾರ್ಮಿಕ ಸಚಿವರಾದ ಶ್ರೀ ಅಜೀಜ್ ಸೇಟ್ ರವರು ಮಾಡಿದ ಭಾಷಣದಲ್ಲಿ, ಎಲ್ಲಾ ಪಾಠಶಾಲೆಗಳಲ್ಲಿ ಕನ್ನಡವನ್ನು ಮಾಧ್ಯಮವನ್ನಾಗಿ ಮಾಡಬೇಕೆಂದೂ ಆದರಿಂದ ಎಲ್ಲಾ ವರ್ಗದ ವಿದ್ಯಾರ್ಥಿಗಳಲ್ಲಿ ಪರಸ್ಪರ ಸಾಮರಸ್ಯ ಭಾವನೆ ಉಂಟಾಗುವುದೆಂದೂ ತಿಳಿಸಿದರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪೌಂಡಲೀತ ಮಂತ್ರಿ ಶ್ರೀ ಬಸವಲಿಂಗಪ್ಪನವರು ಮಾಡಿದ ಭಾಷಣದಲ್ಲಿ, ಜನ ಕೇಸು ಮೇಲು ಎಂಬ ಭಾವನೆಗಳನ್ನೆಲ್ಲಾ ತಾಳಿತು, ಕನ್ನಡಿಗರು ಎಲ್ಲರೂ ಒಂದೇ ಎಂಬ ಭಾವನೆಯನ್ನು ತಿಳಿಸಿಕೊಳ್ಳಬೇಕೆಂದು ತಿಳಿಸಿದರು

● ಬೆಂಗಳೂರು — ಉತ್ತರ ಮೈಸೂರಿನ 6 ಅಭಾವಪೀಡಿತ ಜಿಲ್ಲೆಗಳಲ್ಲಿಯ ಕೈಮಗ್ಗ ಕೆಲಸದವರಿಗೆ ಸಹಾಯಕ್ಕೆಗಿ ಸರಕಾರವು 1 40 ಲಕ್ಷ ರೂಪಾಯಿಗಳಿಂ ತಯಾರಿಸಿದೆ ಎನ್ನಲಾಗಿದೆ

ಸರ್ಕಾರಕ್ಕೆ ಕಾಂಗ್ರೆಸ್ ಬಾಕಿ

ಗಾಂಧಿನಗರ— ಪ್ರಧಾನಿ ಇಂದಿರಾರವರು ಚುನಾವಣೆಗೆ ಮುಂಚೆ ಅ ಮೆ ರೇ ಲಿ ವಿಮಾನ ನಿಲ್ದಾಣದಲ್ಲಿ ಭಾಷಣ ಮಾಡಿದ ಬಹಿರಂಗ ಸಭೆ ಸಂಬಂಧದಲ್ಲಿ ಸರಕಾರಕ್ಕೆ ಗುಜರಾತು ಪ್ರದೇಶ ಕಾಂಗ್ರೆಸ್ ರೂ 11648 ಬಾಕಿ ಕೊಡಬೇಕಾಗಿದೆಯೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

★

3500 ಕಾರ್ಡುಗಳು

ಬೆಂಗಳೂರು— ಹಿಂದೂಸ್ಥಾನ್ ಮೆಷಿ ಟೂಲ್ ಫ್ಯಾಕ್ಟರಿ ನೌಕರರ ಸಂಘವು ತಮ್ಮ ಇತರ ಕೇಳಿಕೆ ಜೊತೆಗೆ 40 ಮಂದಿ ನೌಕರರ ಮೇಲಿನ ಸಸ್ಪೆಂಡು ಆರ್ಡರು ವಾಪಸ್ಸು ತೆಗೆದುಕೊಳ್ಳಲು ಮುಖ್ಯ ಮಂತ್ರಿಗಳಿವರ ಮಧ್ಯಸ್ತಿಕೆ ಕೋರಿ 3500 ಕಾರ್ಡುಗಳನ್ನು ಬರೆಯಲಾಗಿದೆ.

●

ಪಾಕಿಸ್ತಾನಕ್ಕೆ 6000 ಜನ ವಾಪಸ್ಸು

ನವದೆಹಲಿ— ಮಾನವೀಯ ಸೌಹಾರ್ದಕ್ಕಾಗಿ ಭಾರತ ಸರಕಾರ ಮತ್ತು ಬಂಗ್ಲಾ ದೇಶಗಳು ಭಾರತದಲ್ಲಿರುವ ಪಾಕಿಸ್ತಾನಿ ಬಂಧಿತರ ಮತ್ತು ಯುದ್ಧ ಖೈದಿಗಳ ಸಂಸಾರಗಳ 6000 ಜನರನ್ನು ಪಾಕಿಸ್ತಾನಕ್ಕೆ ವಾಪಸ್ಸು ಕಳುಹಿಸಲು ನಿರ್ಧರಿಸಿವೆ.

○

ಭತ್ತ ಸಾಗಾಣಿಕೆಗೆ ಪ್ರತಿಬಂಧಕ

ಬೆಂಗಳೂರು— ಅಂತರ ಜಿಲ್ಲೆಗಳಲ್ಲಿ ಭತ್ತ, ಅಕ್ಕಿ ಸಾಗಾಣಿಕೆಯನ್ನು ಪ್ರತಿಬಂಧಿಸಲು ಸರ್ಕಾರ ಯೋಜಿಸಿದೆ

○

ಎಂ ಎಸ್ ಕೆ ಮಿಲ್ಸ್

ಬೆಂಗಳೂರು — ಗುಲ್ಬರ್ಗಾ ಎಂ. ಎಸ್. ಕೆ ಗಿರಣಿಯನ್ನು ಸರಕಾರ ವಹಿಸಿಕೊಂಡಿದ್ದುದು ರಾಜ್ಯ ಸರಕಾರಕ್ಕೆ ಆಶ್ಚರ್ಯವನ್ನುಂಟುಮಾಡಿದೆ.

ಗೋಳೀಬಾರ್

ಹೈದರಾಬಾದು— ಪೂರ್ಣ ಆಂಧ್ರ ಭಾಗದಲ್ಲಿ ನಿನ್ನೆ ಬಂದ್ ಯಶಸ್ವಿಯಾಯಿತು – ಕೆಲವು ಕಡೆ ಹೆಚ್ಚು ಗಲಭೆಯಾಯಿತು – ರೈಲ್ವೇ ಸ್ಟೇಷನ್‌ಗಳ ಮೇಲೆ ನಡೆದು ಆಸ್ತಿಪಾಸ್ತಿ ತುಂಬಾ ನಷ್ಟವಾಯಿತು – 3 ಕಡೆ ಗೋಳೀಬಾರು ನಡೆದು, ತೆನಾಲಿಯಲ್ಲಿ 6 ಸಾವು, ಅಂಗೇಲದಲ್ಲಿ 2 ಸಾವು, ಆದೋನಿಯಲ್ಲಿ 1 ಸಾವು ಆಯಿತು ; ಗೋಳೀಬಾರು ಬಗ್ಗೆ ಮಾಜಿಸ್ಟ್ರೇಟರ ವಿಚಾರಣೆ ಆಜ್ಞೆಯಾಗಿದೆ — ಮುಲ್ಕೀ ಪರದವರು ಕರೆದಿದ್ದ ಬಂದ್ ಹೈದರಾಬಾದು ಸಿಕಿಂದರಾಬಾದಿನಲ್ಲಿ ಯಶಸ್ವಿಯಾಗಿ ನಡೆಯಿತು

★

ಹೊಸ ಸೇತುವೆ

ನಂಜನಗೂಡು — ಕಬಿನಿ ನದಿಗೆ ಅಡ್ಡವಾಗಿ ರೂ 20 ಲಕ್ಷದ ಸೇತುವೆಯ ಶಂಕುಸ್ಥಾಪನೆ ಮಾಡುತ್ತಾ, ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್ ರವರು– ಈಗಿನ ಸೇತುವೆ ಕಿರಿದಾಗಿದ್ದು, ಅಗಲನಾಗಿರುವುದ ನಿರೀಕ್ಷಿಸಲಾಗಿತ್ತೆಂದು ಹೇಳಿದರು.

★

ಗುಲ್ಬರ್ಗಾ ಪ್ರದೇಶ ಕಾಂಗ್ರೆಸ್ ಸಮಿತಿ

ಬೆಂಗಳೂರು— ಮಂತ್ರಿಮಂಡಲ ನಿರಾಕರಿಸಿದ್ದರೂ ಕೂಡ, ಸರಕಾರವು ಗುಲ್ಬರ್ಗಾ ಜಿಲ್ಲೆಯಲ್ಲಿ ಸರಿಯಾದ ಅಭಾವ ಕಾರ್ಯಕ್ಕೆ ಕೈಗೊಂಡಿಲ್ಲವಾಗಿ, ಆ ಜಿಲ್ಲೆಯ ಕಾಂಗ್ರೆಸ್ ಪಾರ್ಟಿಯ ಎಲ್ಲಾ ಶಾಸಕರೂ ತಮ್ಮ ರಾಜೀನಾಮೆಯನ್ನು ಎಂ ಪಿ ಸಿ ಸಿ ಗೆ ಅರ್ಪಿಸುವಂತೆ ಜಿಲ್ಲಾ ಕಾಂಗ್ರೆಸ್ ಸಮಿತಿ ಸೂಚಿಸಿದೆ – ಭಾನುವಾರ, ಶಾಸನಸಭೆ ಪ್ರಾರಂಭವಾಗುವ ಹಿಂ ನದಿನ ಶಾಸಕರು ಮುಖ್ಯಮಂತ್ರಿಯವರ ನಿವಾಸದ ಮುಂದೆ ಸತ್ಯಾಗ್ರಹ ನಡೆಸಲೂ ತೀರ್ಮಾನಿಸಲ್ಪಟ್ಟಿದೆ.

★

"ಶ್ಯಾಮು" ಮಗು ತಪ್ಪಿಸಿಕೊಂಡಿದೆ –
ಹುಡುಕಿಕೊಟ್ಟವರಿಗೆ ರೂ. 1 ಸಾವಿರ ಬಹುಮಾನ

ಎರಡು ವರ್ಷಗಳ ಗಂಡು ಮಗು "ಶ್ಯಾಮು" 29–9–72 ನೇ ಶುಕ್ರವಾರ ಮನೆಯಿಂದ ತಪ್ಪಿಸಿಕೊಂಡಿದ್ದಾನೆ. ನೋಡಲು ಅಂದವಾಗಿದ್ದಾನೆ. ಕೆಂಪು ಮಿಶ್ರಿತ ಬಿಳಿ ಬಣ್ಣ, ಬಲ ತುಟಿಯ ಮೇಲೆ ಮೂಗಿನ ಕೆಳಗೆ ಮಾದ ಗಾಯದ ಗುರುತು ಇದೆ. ತಪ್ಪಿಸಿಕೊಂಡ ದಿನ ಮಿಲಿಟರಿ ಖಾಕಿ ಬಣ್ಣದ ಪೈಜಾಮ, ಕಾಫಿ ಬಣ್ಣದ ಚೌಕಳಿ ಶರ್ಟು ಹಾಕಿದ್ದನು. ಕ್ರಾಪ್ ಮಾಡಿರಲಿಲ್ಲ. ತನ್ನ ಹೆಸರು "ಶ್ಯಾಮು" ಎನ್ನುತ್ತಾನೆ. 'ಅಪ್ಪ ಆಫೀಸಿಗೆ, ಅಮ್ಮಾ ಕಾಲೇಜಿಗೆ ಹೋಗಿದ್ದಾರೆ" ಎನ್ನುತ್ತಾನೆ. ಕನ್ನಡ ಮಾತನಾಡುತ್ತಾನೆ.

ಮಗುವಿನ ಸುಳುವು ಕೊಟ್ಟವರಿಗೆ ಅಥವಾ ಪತ್ತೆಹಚ್ಚಿದವರಿಗೆ ಪೋಲೀಸರ ಪೋಲೀಸರ ಬಹುಮಾನವೂ ಉಂಟು.

ಮಗು ಸಿಕ್ಕರೆ ಈ ಕೆಳಗಿನ ವಿಳಾಸಕ್ಕಾಗಲೀ, ಹತ್ತಿರದ ಪೋಲೀಸು ಸ್ಟೇಷನಿಗಾಗಲೀ ತಂದುಕೊಡಿ. ಮಗುವಿನ ತಂದೆಯವರಿಂದ ಒಂದು ಸಾವಿರ ರೂಪಾಯಿ ಬಹುಮಾನವನ್ನು ಪಡೆಯಿರಿ

ಎಸ್. ಕೆ. ಹರಿಹರೇಶ್ವರ, ಎಂ 36, 3 ನೇ ಕ್ರಾಸ್,
ಲಕ್ಷ್ಮೀನಾರಾಯಣಪುರ, ಶ್ರೀರಾಮಪುರ, ಬೆಂಗಳೂರು - 21

ವುಡ್‌ಲಾಂಡ್ಸ್ ಅಮೋಘ 8 ನೇ ವಾರ

ರಾಜೇಂದ್ರ ಕುಮಾರ್ ಅಭಿನಯಿಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಅತ್ಯಮೋಘ ಚಿತ್ರ

ಜಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಅಪೇರಾ 17 11 72 ರಿಂದ

ಅತ್ಯನೋಘ ಹಿಂದಿ ಕಲರ್ ಚಿತ್ರ

ಶಾದಿ ಕೆ ಬಾದ್

ಪಾತ್ರ : ಜಿತೇಂದ್ರ, ರಾಖಿ, ಶತ್ರುಘ್ನಸಿನ್ಹ, ನಾಜ್ ಮತ್ತು ಶ್ಯಾಮ

ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್ ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ ಪೂರ್ಣ ನಿಷೇಧವಾಗಲಿ

Edited Printedand Published by Dharmapracharanirata M S Krishna Rao (Propretor) at the Satyavad. Press, Chamarajpuram Mysore

Contribute Liberally to the National Defence Fund

SHAKTI SUDHA

A Superb Tonic

Quality Printing Neat Binding

Lakshminarasimha Pres

Sivarampet, Mysore

Help The Gorakshana

—Humanitarian Propoganda Monthly....



Protect the Cow